2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ
ಚಿಕ್ಕಮಗಳೂರು

<u>ಸತ್ರ ಮೊಕದ್ದಮೆ ನಂಃ**129/2013**</u>

| | | | |
|---|---|---|---|
| ಸಾಕ್ಷಿದಾರರ ಹೆಸರು | - ರಜನಿಕಾಂತ್ | | ಪಿಡಬ್ಲ್ಯೂ - 6 |
| ತಂದೆಯ ಹೆಸರು | - ಕಾಳೇಗೌಡ | | ಸಿಡಬ್ಲ್ಯೂ - 6 |
| ವಯಸ್ಸು | - 34 ವರ್ಷ | | |
| ಉದ್ಯೋಗ | - ವ್ಯವಸಾಯ | | |
| ವಾಸ ಸ್ಥಳ | - ಹೀಚುವಳ್ಳಿ, ಹಳೇಕೆರೆ ಗ್ರಾಮ, ಮೂಡಿಗೆರೆ ತಾಲ್ಲೂಕು | | |

ದಿನಾಂಕಃ 18-01-2019 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ ಮಾನ್ಯ ಪಿ.ಪಿ. ರವರಿಂದ -</u>

1. ನನಗೆ ನ್ಯಾಯಾಲಯದ ಮುಂದಿರುವ ಆರೋಪಿಗಳ ಪರಿಚಯ ಇದೆ. ಮೃತ 2 ನೇ ಆರೋಪಿಯ ಪರಿಚಯ ಕೂಡ ಇರುತ್ತದೆ. ಈ ದಿನ 1 ನೇ ಆರೋಪಿ ಗೈರು ಹಾಜರಾಗಿದ್ದು (1 ನೇ ಆರೋಪಿತನ ಪರ ವಕೀಲರು ವಿನಾಯಿತಿ ಅರ್ಜಿ ಸಲ್ಲಿಸಿದ್ದು ಅದರಲ್ಲಿ ಆತನ ಗುರುತಿಸುವಿಕೆಯನ್ನು ಅಲ್ಲಗಳೆಯುವುದಿಲ್ಲ ಎಂದು ತಿಳಿಸಿರುತ್ತಾರೆ.) ಆತನ ಪರಿಚಯ ಇರುತ್ತದೆ. ಪ್ರಾಸಾ.1 ರಘು ಮತ್ತು ಪ್ರಾಸಾ.2 ಪೂರ್ಣೇಶ್ ರವರು ಗೊತ್ತು.

2. ದಿಃ 23.02.2013 ರಂದು ಸುಮಾರು ಬೆಳಿಗ್ಗೆ 11 ಗಂಟೆಗೆ ನಾವು ನಮ್ಮ ಊರಿನ ಸರ್ವೆ ನಂಬರ್ 47 ರ ಜಾಗದಲ್ಲಿ ಸೇರಿದ್ದೆವು. ಗ್ರಾಮ ಲೆಕ್ಕಾಧಿಕಾರಿ ಮತ್ತು ಪೊಲೀಸರು ಸದರಿ ಜಾಗಕ್ಕೆ ಬಂದಿದ್ದರು ಮತ್ತು ಅಲ್ಲಿ ಕಾಫಿ ಕುಯಲ್ಲು ಮಾಡಲು ತಹಶೀಲ್ದಾರರ ಆದೇಶದಂತೆ ಕೃಷಿ ಕಾರ್ಮಿಕರು ಬಂದಿದ್ದರು. ಆ ಸಮಯದಲ್ಲಿ ನಾನು, ಪ್ರಾಸಾ.1 ರಿಂದ ಪ್ರಾಸಾ.5 ಮತ್ತು

ಮಡಿವಾಳ ಜನಾಂಗದ ಜನರು ಮತ್ತು ಇತರರು ಸುಮಾರು ಜನ ಸೇರಿದ್ದರು.

3. ತಹಶೀಲ್ದಾರರ ಆದೇಶದಂತೆ ಕಾರ್ಮಿಕರು ಸರ್ವೆ ನಂಬರ್ 47 ರಲ್ಲಿ ಬೆಳೆದ ಕಾಫಿ ಕುಯ್ಯಲು ಮಾಡುತ್ತಿರುವಾಗ ಉಳಿದ ಆರೋಪಿಗಳು 1 ನೇ ಆರೋಪಿಗೆ ಪೋನ್ ಮಾಡಿ ಸ್ಥಳಕ್ಕೆ ಬರಲು ಹೇಳಿದರು. ಅದರಂತೆ 1 ನೇ ಆರೋಪಿಯು ಸ್ಥಳಕ್ಕೆ ತಮ್ಮ ವಾಹನ ಸಂಖ್ಯೆ: ಕೆ.ಎ.18/ಎಂ.ಕೆ.100 ರಲ್ಲಿ ಬಂದರು. 1 ನೇ ಆರೋಪಿ ಬಂದವರೇ ಫ್ರಾಸಾ.1 ರಘು ರವರನ್ನು ಉದ್ದೇಶಿಸಿ ಸೂಳೇ ಮಗನೆ, ಬೋಳಿ ಮಗನೆ ಎಂದು ಬೈದರು. ನೀವು ಇಲ್ಲಿ ಏಕೆ ಬಂದಿದ್ದೀರಿ ಎಂದು ಕೇಳಿದರು. 2 ನೇ ಆರೋಪಿಗೆ 1 ನೇ ಆರೋಪಿಯು ಕತ್ತಿ ತರಲು ಹೇಳಿದನು.

4. ಅದರಂತೆ 4 ನೇ ಆರೋಪಿ ಮನೆಯಿಂದ 2 ಕತ್ತಿಗಳನ್ನು ತಂದರು. 1 ನೇ ಆರೋಪಿ 2 ನೇ ಆರೋಪಿಯ ಕೈಯಿಂದ ಕತ್ತಿಯನ್ನು ಕಸಿದುಕೊಂಡು ಫ್ರಾಸ್ಾ.1 ರವರ ಕುತ್ತಿಗೆ ಮೇಲೆ ಹೊಡೆಯಲು ಹೋದರು. ಆಗ ಫ್ರಾಸಾ.1 ರವರು ತಮ್ಮ ಕೈಯನ್ನು ಅಡ್ಡ ಮಾಡಿದಾಗ ಅವರ ಹೆಬ್ಬೆರಳು ಮತ್ತು ಮಧ್ಯೆ ಬರಳಿಗೆ ಬಲವಾದ ಪೆಟ್ಟಾಗಿ ರಕ್ತ ಬಂದಿರುತ್ತದೆ. ಆ ಸಮಯದಲ್ಲಿ ಫ್ರಾಸಾ.2 ಸದರಿ ಹಲ್ಲೆಯನ್ನು ತಡೆಯಲು ಹೋದಾಗ ಆತನಿಗೂ ಸಹ 2 ಮತ್ತು 3 ನೇ ಆರೋಪಿಗಳು ದೊಣ್ಣೆ ಮತ್ತು ಕಲ್ಲಿನಿಂದ ಆತನ ಎಡಕೈಯ ಮಣಕಟ್ಟಿಗೆ ಮತ್ತು ಕಲ್ಲಿನಿಂದ ಆತನ ಕಾಲಿನ ಪಾದಕ್ಕೆ ಹೊಡೆದಿರುತ್ತಾರೆ. ನಂತರ 1 ನೇ ಆರೋಪಿ ತಮ್ಮ ಕಾರನ್ನು 3-4 ಸಲ ಹಿಂದೆ ಮುಂದೆ ಮಾಡಿ ನಮ್ಮ ಮೇಲೆ ಹಾಯಿಸಲು ಪ್ರಯತ್ನಿಸಿದರು. ನಂತರ ಫ್ರಾಸಾ.1 ಮತ್ತು 2 ರವರು ಆಸ್ಪತ್ರೆಗೆ ಹೋದರು. ನಾನು ನಮ್ಮ ಮನೆಗೆ ಬಂದೆನು.

5. ಆರೋಪಿಗಳು ಫ್ರಾಸಾ.1 ರಘು, ಫ್ರಾಸಾ.2 ಪೂರ್ಣೇಶ್ ರವರ ಮೇಲೆ

ಹಲ್ಲೆ ಮಾಡಲು ಉಪಯೋಗಿಸಿದ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. ಅವುಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ಮು.ಮಾ.1 ರಿಂದ 4 ಎಂದು ಗುರುತಿಸಲಾಗಿದೆ.

6. ಈಗ ನ್ಯಾಯಾಲಯದ ಮುಂದಿರುವ ಆರೋಪಿಗಳು ಮತ್ತು ಗೈರು ಹಾಜರಾದ 1 ನೇ ಆರೋಪಿಗಳೇ ಫ್ರಾಸಾ.1 ಮತ್ತು 2 ರವರ ಮೇಲೆ ಆ ದಿನ ಹಲ್ಲೆ ಮಾಡಿದವರಾಗಿರುತ್ತಾರೆ.

ಪಾಟೀ ಸವಾಲು ಶ್ರೀ ಎಸ್.ಹೆಚ್.ಎಂ.ಕೆ. ವಕೀಲರಿಂದ – 1, 3 ಮತ್ತು 4 ನೇ ಆರೋಪಿತರ ಪರವಾಗಿ

7. ನನ್ನ ಮೇಲೆ 1 ನೇ ಆರೋಪಿಯ ಮೇಲೆ ಹಲ್ಲೆ ಮಾಡಿದ್ದರ ಕುರಿತು ಪ್ರಕರಣ ಇದೆ ಎಂದರೆ ಸರಿ. ಕೆಳಗಿನ ನ್ಯಾಯಾಲಯದಲ್ಲಿ ನನ್ನ ಮತ್ತು ಫ್ರಾಸಾ.1 ರವರ ಮೇಲೆ 1 ನೇ ಆರೋಪಿಯ ವಿರುದ್ಧ ಪತ್ರಿಕಾ ಹೇಳಿಕೆ ಕೊಟ್ಟಿದ್ದರ ಕುರಿತು ಪ್ರಕರಣ ಇದೆ ಎಂದರೆ ಸುಳ್ಳು, ಘಟನೆ ನಡೆದ ದಿನ ಅಂದು ಯಾವ ದಿನ ಆಗಿತ್ತು ಎಂದರೆ ನನಗೆ ನೆನಪಿಲ್ಲ. 1 ನೇ ಆರೋಪಿಯ ಬಳಿ ಟಾಟಾ ಸುಮೋ ಕಾರು ಇರುತ್ತದೆ.

8. ಹಳೇಕೆರೆ, ಮಡ್ಡಿಕೆರೆ ಮತ್ತು ಹೀಚುವಳ್ಳಿ ಗ್ರಾಮಗಳು ಸೇರಿ ಸುಮಾರು 100 ಮನೆಗಳು ಇರುತ್ತವೆ. 1 ನೇ ಆರೋಪಿಯು ತಮ್ಮ ಮನೆಗೆ ವಾಹನದಲ್ಲಿ ಹೋಗುವಾಗ ನಾನು ಮತ್ತು ಫ್ರಾಸಾ.1 ರಂದ ಫ್ರಾಸಾ.5 ಅವರ ವಾಹನವನ್ನು ಅಡ್ಡಗಟ್ಟಿ ಹಳೇ ದ್ವೇಷದಿಂದ ಅದನ್ನು ಜಕುಂ ಮಾಡಿ ಅವರ ಮೇಲೆ ಹಲ್ಲೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸರ್ವೆ ನಂಬರ್ 47 ರಲ್ಲಿ ನನಗೆ ಯಾವುದೇ ಜಮೀನು ಮಂಜೂರು ಆಗಿಲ್ಲ. ಘಟನೆ ನಡೆದ ದಿನ

ಸ್ಥಳದಲ್ಲಿ ಸುಮಾರು 25 ಜನ ಇದ್ದೆವು. ಕಾಫಿ ಕುಯ್ಯಲು ಮಾಡುವ ಕಾರ್ಮಿಕರು 5-6 ಜನ ಇದ್ದರು. ಕಾಫಿ ಕುಯ್ಯಲು ಮಾಡುವ ಕಾರ್ಮಿಕರನ್ನು ಯಾರು ಕರೆದುಕೊಂಡರು ಬಂದಿದ್ದರು ಎಂಬುದು ನನಗೆ ಗೊತ್ತಿಲ್ಲ. 1 ನೇ ಆರೋಪಿಗೂ ಮತ್ತು ಮಡ್ಡಿಕೆರೆ, ಹಳೇಕೆರೆ ಗ್ರಾಮದವರಿಗೂ ಮೊದಲಿನಿಂದಲೂ ವಿವಾದ ಇರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ.

9. ಘಟನೆ ನಡೆದ ದಿನ ಕಂದಾಯ ಅಧಿಕಾರಿ ಮತ್ತು ಪೊಲೀಸರು ಘಟನೆ ಮುಗಿಯುವವರೆಗೂ ಸ್ಥಳದಲ್ಲಿ ಇದ್ದರು. ಸರ್ವೇ ನಂಬರ್ 47 ರಲ್ಲಿ ಬೆಳೆದಿದ್ದ ಕಾಫಿ ಕುಯ್ಯಲು ಮಾಡಲು ತಹಶೀಲ್ದಾರರ ಲಿಖಿತ ಆದೇಶ ಇದ್ದ ಬಗ್ಗೆ ನಾನು ನೋಡಿರುವುದಿಲ್ಲ. ಕಂದಾಯ ಅಧಿಕಾರಿ ಮತ್ತು ಪೊಲೀಸರು ನನಗೆ ಸ್ಥಳಕ್ಕೆ ಬರಲು ನೋಟೀಸ್ ನ್ನು ನೀಡಿರಲಿಲ್ಲ. ಘಟನೆ ನಡೆದ ದಿನ ಪ್ರಾಸಾ.1 ರವರು ನೀಲಿ ಬಣ್ಣದ ಶರ್ಟು ಹಾಕಿದ್ದರು.

10. ಘಟನೆ ನಡೆದ ದಿನ 1 ನೇ ಆರೋಪಿಯು ಕತ್ತಿಯಿಂದ ಪ್ರಾಸಾ.1 ರವರ ಕುತ್ತಿಗೆಗೆ ಹಲ್ಲೆ ಮಾಡಲು ಬಂದಾಗ ಪ್ರಾಸಾ.1 ರವರು ತನ್ನ ಕೈಯನ್ನು ಅಡ್ಡ ಹಿಡಿದಾಗ ಸದರಿ ಹಲ್ಲೆಯಿಂದ ಆತನ ಕೈ ಬೆರಳುಗಳಿಗೆ ರಕ್ತಗಾಯವಾಗಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿಯು ತನ್ನ ಕಾರನ್ನು 3-4 ಸಲ ಹಿಂದೆ ಮುಂದೆ ಚಲನೆ ಮಾಡಿದಾಗ ಹಿಂಭಾಗದ ಗ್ಲಾಸು ಗೆರೆಗೆ ತಾಗಿ ಒಡೆದು ಹೋಗಿದ್ದು ಸುಳ್ಳು, ನಾವು ಅದನ್ನು ಒಡೆದು ಹಾಕಿದ್ದೇವೆ ಎಂದರೆ ಸರಿಯಲ್ಲ. ಮತ್ತು 1 ನೇ ಆರೋಪಿಯ ಮೇಲೆ ನಾವೆಲ್ಲರು ಹಲ್ಲೆ ಮಾಡಿದ್ದೇವೆ ಎಂದರೆ ಸರಿಯಲ್ಲ. ಈಗ ಮೇಲೆ ಹೇಳಿದ ವಿಷಯವನ್ನು ನಾನು ಪೊಲೀಸರಿಗೆ ತಿಳಿಸಿರುತ್ತೇನೆ. ಘಟನೆ ನಡೆದ ದಿನ ಮತ್ತು 2-3 ದಿನಗಳ ನಂತರ ಪೊಲೀಸರಿಗೆ ಹೇಳಿಕೆ ಕೊಟ್ಟಿದ್ದೇನೆ, ಆದರೆ ಯಾವ

ದಿನಾಂಕ ಎಂದು ನೆನಪಿಲ್ಲ. ಪೊಲೀಸರು ಕೇಳಿದ ದಾಖಲೆಗೆ ನಾನು ಸಹಿ ಮಾಡಿರುವುದಿಲ್ಲ.

11. ಈಗ ನ್ಯಾಯಾಲಯದ ಮುಂದೆ ತೋರಿಸಿದ ಮು.ಮಾ.1 ಮತ್ತು 2 ಗಳು ಸಮಾನ್ಯವಾಗಿ ಕಾಫಿ ಬೆಳೆಯುವ ರೈತರ ಮನೆಯಲ್ಲಿ ಇರುತ್ತದೆ ಎಂದರೆ ಸರಿ. ಮು.ಮಾ.1 ಮತ್ತು 2 ಗಳನ್ನು ಘಟನೆ ನಡೆದ ದಿನ ನೋಡಿದ್ದು ಬಿಟ್ಟರೆ ಈ ದಿನವೇ ನ್ಯಾಯಾಲಯದಲ್ಲಿ ನೋಡಿದ್ದೇನೆ ಎಂದರೆ ಸರಿ. ಘಟನೆ ನಡೆದ ದಿನ ಮು.ಮಾ.1 ಮತ್ತು 2 ಯಾರ ಯಾರ ಕೈಯಲ್ಲಿ ಇದ್ದವು ಎಂಬುದು ನನಗೆ ಹೇಳಲು ಬರುತ್ತದೆ. ಮು.ಮಾ.1 ದೊಡ್ಡ ಕತ್ತಿ 1 ನೇ ಆರೋಪಿಯ ಕೈಯಲ್ಲಿ ಇತ್ತು. ಮು.ಮಾ.2 3 ನೇ ಆರೋಪಿಯ ಕೈಯಲ್ಲಿ ಇತ್ತು. ಮು.ಮಾ.1 ಮತ್ತು 2 ರ ಮೇಲೆ ಯಾವುದೇ ವಿಶೇಷ ಗುರುತು ಮಾಡಿಕೊಂಡಿರಲಿಲ್ಲ. ನನಗೂ ಮತ್ತು 1 ನೇ ಆರೋಪಿ ಯವರಿಗೂ ವೈಮನಸ್ಸು ಇದೆ ಎಂದರೆ ಇಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದ ರೀತಿ ಯಾವುದೇ ಘಟನೆ ನಡೆದಿಲ್ಲ ಮತ್ತು ಫ್ರಾಸಾ.1 ರಘು ರವರ ಮಾತು ಕೇಳಿಕೊಂಡು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ ಇಲ್ಲ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

(ಮಂಜುನಾಥ ಸಂಗ್ರೇಶಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಮಾ